# ನೀ ಕೊಡೆ ನಾ ಬಿಡೆ ಕೇಳಯ್ಯ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 120.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 342.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 443.
4. **Note:** Lyrics given without highlights are as per Ref. 1. The wordings given in yellow highlights are as per Ref. 2. The wordings in Ref. 3 are a mix of Ref. 1 and Ref. 2.
5. **Note:** Singer has followed Lyrics as in Ref. 2.
6. **Note:** Ankita is different in these reference books. We have considered book in Ref.1 as standard and taken that Ankita for listing.

ರಾಗ: ಶಂಕರಾಭರಣ ತಾಳ: ಅಟ

| | |
|---|---|
| ನೀ ಕೊಡೆ ನಾ ಬಿಡೆ ಕೇಳಯ್ಯ – ಹರಿ | ನೀ ಕೊಡೆ ನಾ ಬಿಡೆ ಕೇಳಯ್ಯ ರಂಗ |
| ಗೋಕುಲಪತಿ ಗೋವಿಂದಯ್ಯ ‖ ಪ ‖ | ಗೋಕುಲಪತಿ ಗೋವಿಂದಯ್ಯ |
| | |
| ನೋಡುವೆ ನಿನ್ನನು ಪಾಡುವೆ ಗುಣಗಳ | ನೋಡುವೆ ನಿನ್ನನು ಪಾಡುವೆ ಗುಣಗಳ |
| ಕಾಡುವೆ ಬೇಡುವೆ ನಾಡೊಳಗೆ | ಬೇಡುವೆ ಕಾಡುವೆ ನಾಡೊಳಗೆ |
| ಮೋಡಿಯ ಬಿಡು ಕೊಡು ಮೊದಲಿಗೆ ಬಡ್ಡಿಯ | ಮೋಡಿಯ ಬಿಡು ಬಿಡು ಮೊದಲಿಗ ಬಡ್ಡಿಯ |
| ಕಾಡೊಳು ತುರುಗಳ ಕಾಯ್ದರಸನೆ ಹರಿ ‖ 1 ‖ | ಕಾಡಲಿ ತುರುಗಳ ಕಾಯ್ದ ರನ್ನ |
| | |
| ಎಂಟಕ್ಷರವಿವೆ ದ್ವಯ ಸಾಕ್ಷಿಗಳಿವೆ | ಎಂಟಕ್ಷರವಿದೆ ಹೃದಯ ಸಾಕ್ಷಿಗಳಿವೆ |
| ಗಂಟಿಗೆ ಮೋಸವೆ ದಾಸರಿಗೆ | ಗಂಟೆಗೆ ಮೋಸವೆ ದಾಸನಿಗೆ |
| ಉಂಟುಂಟೆನಿಸುವೆ ಬಂಟರ ಬಾಯಲಿ | ಎಂಟೆಟೆನಿಸುವ ಬಂಟನ ಕೈಯಲಿ |
| ತುಂಟತನವ ಬಿಡು ತುಡುಗರರಸನೆ ‖ 2 ‖ | ತುಂಟತನವ ಬಿಡೊ ತುಡುಗರಸೊ |
| | |
| ಅಪ್ಪನೆ ಅಯ್ಯನೆ ಅಮರರಿಗೊಲಿದನೆ | ಅಪ್ಪ ಶ್ರೀ ಕೃಷ್ಣನೆ ಅಮರರಿಗೊಲಿದನೆ |

| | |
|---|---|
| ಸರ್ಪನ ಮೇಲೆ ಮಲಗಿಪ್ಪವನೆ | ಸರ್ಪನ ಮೇಲೊರಗಿಪ್ಪವನೆ |
| ಒಪ್ಪಿಸಿ ಕೊಟ್ಟರೆ ಪುರಂದರ ವಿಠಲನೆ | ಒಪ್ಪಿಸಿ ಕೊಟ್ಟರೆ ಪುರಂದರ ವಿಠಲನ |
| ಒಪ್ಪವ ತೋರುವೆ ಒಡೆಯನಿಗೆ ॥ 3 ॥ | ಒಪ್ಪುತ ಪಾಡುವೆ ನಡೆ ಮನೆಗೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದರಲ್ಲಿ ದಾಸರು ಇನ್ನೊಂದು ಬಗೆಯ ವಿನೋದವನ್ನು ರೂಪಕ ರೀತಿಯಲ್ಲಿ ಬಣ್ಣಿಸಿದ್ದಾರೆ. ದೇವರಿಗೆ ಭಕ್ತನು ಕೊಟ್ಟ ಸಾಲವನ್ನು ಮರಳಿ ಪಡೆಯುವ ಭಾವವು ಇದರಲ್ಲಡಗಿದೆ.

**ಮೋಡಿ** – ಮಾಯ, ಕಪಟ, ಸೋಗು.

**ಎಂಟಕ್ಷರವಿದೆ** – 'ಓಂ ನಮೋ ನಾರಾಯಣಾಯ' ಎಂಬ ಅಷ್ಟಾಕ್ಷರಿ ಮಂತ್ರ.

**ದ್ವಯಸಾಕ್ಷಿ** – 'ನ ಮೇ ಭಕ್ತಃ ಪ್ರಣಶ್ಯತಿ' ("ನನ್ನ ಭಕ್ತರು ಹಾಳಾಗುವುದಿಲ್ಲ") ಮತ್ತು 'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ' ("ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುತ್ತೇನೆ") ಎಂಬ ಭಗವಂತನೇ ಕೊಟ್ಟಿರುವ ಎರಡು ಆಶ್ವಾಸನೆಗಳು.

**ಗಂಟು** – ಹರಿದಾಸರ ಮೂಲಧನ, ಆತ್ಯಂತಿಕ ಭಕ್ತಿ.

**ಉಂಟುಂಟೆನಿಸುವೆ** = ಸತ್ಯದ ಬಗೆಗೆ ಸಾಕ್ಷಿ ಹೇಳಿಸುವೆ

**ಬಂಟರು** = ಭಕ್ತರು

**ತುಡುಗ** – ಕಳ್ಳ.

**ತುಡುಗರ ಅರಸ** = ಗೊಲ್ಲರ ಹುಡುಗರ ಮುಂದಾಳಾಗಿ ಹೈನದ ಕಳವು ಮಾಡಿದನು

**ಆಗಭೋಗ** – (ಆಗಸ್) ದುರಾಚಾರದ ವಿಷಯತೃಪ್ತಿ.

**ಅನುಭೋಗ** – ಪೂರ್ವಕರ್ಮದ ಫಲವನ್ನು ಅನುಭವಿಸುವುದು.

**ಸಾಯುಜ್ಯ** – ಮುಕ್ತಿಯಲ್ಲೊಂದು ಬಗೆ.

**Classification:** Keerthane
**Ankita:** purandara vittala
**Location:** NA
**Category:** Artha Bhava, Bhakti

**Sub-Category:** ranga, govinda, gokula, govu, hrudaya, mosa, kai, Krishna, mane, mukti, vaikunta, appa, uraga, kaadu,
**Pravachana:** NA
**Explanation:** NA